ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

41ನೇ ವರ್ಷದಲ್ಲಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಸೋತ ವಿಜಯ ಮಲ್ಯ : 90 ಮಿಲಿಯನ್ ಡಾಲರ್ ಪಾವತಿಗೆ ಸೂಚನೆ

ಮದ್ಯದ ದೊರೆ ವಿಜಯ ಮಲ್ಯ ಮಾಲೀಕತ್ವದ ಕಿಂಗ್‌ಫಿಶರ್ ಏರ್‌ಲೈನ್ಸ್ ಕಾನೂನು ಹೋರಾಟದಲ್ಲಿ ಹಿನ್ನೆಡೆಯಾಗಿದ್ದು, ಸಿಂಗಾಪುರ ಮೂಲದ ಬಿಒಸಿ ಏವಿಯೇಷನ್‌ಗೆ 90 ಮಿಲಿಯನ್ ಡಾಲರ್ ಪಾವತಿಸುವಂತೆ ಲಂಡನ್ ಕೋರ್ಟ್ ಸೋಮವಾರ ಆದೇಶಿಸಿದೆ. 4 ವಿಮಾನಗಳ ಲೀಸ್ ಒಪ್ಪಂದಕ್ಕೆ ಸಂಬಂಧಿಸಿದಂತೆ ಭದ್ರತಾ ಠೇವಣಿ ನೀಡಲು ವಿಫಲವಾಗಿದ್ದ ಕಿಂಗ್‌ಫಿಶರ್ ವಿರುದ್ಧ ಬಿಒಸಿ ಏವಿಯೇಷನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಲಂಡನ್ ಹೈಕೋರ್ಟ್ ನ್ಯಾಯಾಧೀಶರು, ಬಾಕಿ ಮೊತ್ತ ಹಾಗೂ ಅದಕ್ಕೆ ಬಡ್ಡಿ ಸೇರಿದಂತೆ 90 ಮಿಲಿಯನ್ ಡಾಲರ್ ಪಾವತಿಸುವಂತೆ ತೀರ್ಪು ನೀಡಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಚಂದ್ರಶೇಖರ ಕಂಬಾರ ಆಯ್ಕೆ

ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಚಂದ್ರಶೇಖರ ಕಂಬಾರ ಅವರು ಸೋಮವಾರ ಆಯ್ಕೆಯಾಗಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಖ್ಯಾತ ಕಥೆಗಾರ, ಕವಿ, ಕಾದಂಬರಿಕಾರ ಹಾಗೂ ನಾಟಕಕಾರ ಚಂದ್ರಶೇಖರ ಕಂಬಾರ ಅವರು ಒಟ್ಟು 89 ಮತಗಳಲ್ಲಿ 56 ಮತ ಗಳಿಸಿ ಭರ್ಜರಿ ಗೆಲುವು ಸಾಧಿಸಿದ್ದಾರೆ.

ಭಾರತ ಅಭಿಮಾನಿಯಿಂದ ಜನಾಂಗೀಯ ನಿಂದನೆ : ಕ್ರಿಕೆಟಿಗನ ಆರೋಪ

ಭಾರತ-ದಕ್ಷಿಣ ಆಫ್ರಿಕಾ ನಡುವೆ ಏಕದಿನ ಸರಣಿ ನಡೆಯುತ್ತಿದ್ದು, 4ನೇ ಏಕದಿನ ಪಂದ್ಯದಲ್ಲಿ ಭಾರತ ತಂಡದ ಅಭಿಮಾನಿಯೊಬ್ಬರಿಂದ ಜನಾಂಗೀಯ ನಿಂದನೆಗೆ ಗುರಿಯಾಗಿರುವುದಾಗಿ ದಕ್ಷಿಣ ಆಫ್ರಿಕಾದ ಆಟಗಾರ ಇಮ್ರಾನ್ ತಾಹಿರ್ ಆರೋಪಿಸಿದ್ದಾರೆ. ಫೆ.10ರಂದು ನಡೆದ ಪಂದ್ಯದಲ್ಲಿ ತಂಡದ 12ನೇ ಸದಸ್ಯನಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಇಮ್ರಾನ್ ತಾಹಿರ್ ವಿರುದ್ಧ ಜನಾಂಗೀಯ ನಿಂದನೆ ಮಾಡಲಾಗಿದೆ ಎಂದು ದಕ್ಷಿಣ ಆಫ್ರಿಕಾ ತಂಡದ ಮ್ಯಾನೇಜರ್ ಹೇಳಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 41 ಸಂಚಿಕೆ :82 ಮಂಗಳವಾರ ಫೆ.13, 2018 ದೂರವಾಣಿ : 268494 ಪುಟ-4 ರೂ.2-00 NO. HSN-761/ 2018-20

ನಗರಸಭೆಗೆ ಉಳಿತಾಯ ಬಜೆಟ್ ಮಂಡನೆ



ಹಾಸನ : ವಿವಿಧ ಅಭಿವೃದ್ಧಿ ಯೋಜನೆಗಳ ವಿವರಗಳೊಂದಿಗೆ ಹಾಸನ ನಗರಸಭೆಯ 2018-19ನೇ ಸಾಲಿನ 113.04 ಕೋಟಿ ರೂ. ಬಜೆಟ್‌ನ್ನು ನಗರಸಭೆಯ ಅಧ್ಯಕ್ಷ ಎಚ್.ಎಸ್.ಅನಿಲ್‌ಕುಮಾರ್ ಸೋಮವಾರ ಮಂಡಿಸಿದರು.

ನಗರಸಭೆಯ ಕುವೆಂಪು ಸಭಾಂಗಣದಲ್ಲಿ ಸೋಮವಾರ ನಡೆದ ನಗರಸಭೆಯ ಸಾಮಾನ್ಯ ಸಭೆಯಲ್ಲಿ ಬಜೆಟ್ ಮಂಡಿಸಿದ ಅನಿಲ್ ಕುಮಾರ್ ಅವರು, ಆರಂಭದ ಶಿಲ್ಕು 18.29 ಕೋಟಿ ರೂ. ಸೇರಿ 94.75 ಕೋಟಿ ರೂ. ಜಮೆ ನಿರೀಕ್ಷಿಸಿ 110.13 ಕೋಟಿ ರೂ. ವೆಚ್ಚ ಪ್ರಸ್ತಾಪ ಮಾಡಿ 2.91 ಕೋಟಿ ರೂ. ಉಳಿತಾಯದ ಪ್ರಸ್ತಾಪ ಮಾಡಿದ್ದಾರೆ.

ಆದಾಯದ ನಿರೀಕ್ಷೆ : ಆಸ್ತಿ ತೆರಿಗೆ ಹಾಗೂ ಖಾತಾ ವರ್ಗಾವಣೆ, ಖಾತಾ ನಕಲು ಶುಲ್ಕದಿಂದ 10.38 ಕೋಟಿ ರೂ. ನಿರೀಕ್ಷಿಸಲಾಗಿದ್ದು, ನೀರಿನ ತೆರಿಗೆ ಹಾಗೂ ನಲ್ಲಿಗಳ ಸಂಪರ್ಕ ಶುಲ್ಕದಿಂದ 29 ಲಕ್ಷ ರೂ., ಉದ್ದಿಮೆ ಪರವಾನಗಿ ಶುಲ್ಕ 40 ಲಕ್ಷ ರೂ., ನಗರಸಭೆ ಅಂಗಡಿ ಮಳಿಗೆಗಳ ಬಾಡಿಗೆ, ನಿವೇಶನಗಳ ಮಾರಾಟದಿಂದ 1.20 ಕೋಟಿ ರೂ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನದಿಂದ 6 ಕೋಟಿ ರೂ., ಬೀದಿ ದೀಪ, ಕುಡಿಯುವ ನೀರಿನ ವಿದ್ಯುತ್ ಬಿಲ್ ಪಾವತಿಗೆ ರಾಜ್ಯ ಸರ್ಕಾರದಿಂದ 10.50 ಕೋಟಿ ರೂ., ರಾಜ್ಯ ಹಣಕಾಸು ಆಯೋಗದಿಂದ ನಗರಸಭೆ ಸಿಬ್ಬಂದಿ ವೇತನ ಹಾಗೂ ಪಿಂಚಣಿಗೆ 9.6 ಕೋಟಿ ರೂ., 14ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಸರ್ಕಾರದಿಂದ 8 ಕೋಟಿ ರೂ., ಕುಡಿಯುವ ನೀರು ಪೂರೈಕೆಗೆ ಎಸ್‌ಎಫ್‌ಸಿ ಅನುದಾನದಿಂದ 2 ಕೋಟಿ ರೂ., ಶಾಸಕರು, ಸಂಸದರ ನಿಧಿಯಿಂದ 25 ಲಕ್ಷ ರೂ., ಸ್ವಚ್ಛ ಭಾರತ್ ಮಿಷನ್ ಅನುದಾನ -25 ಲಕ್ಷ ರೂ., ಅಮೃತ್ ಯೋಜನೆಯಡಿ 2 ಕೋಟಿ ರೂ., ಕೆರೆಗಳ ಅಭಿವೃದ್ಧಿಗೆ ನಗರಾಭಿವೃದ್ಧಿ ಪ್ರಾಧಿಕಾರದಿಂದ 2 ಕೋಟಿ ರೂ., ಕೇಂದ್ರ ಸರ್ಕಾರದ ರಾಷ್ಟ್ರೀಯ ಮೀನುಗಾರರ ಅಭಿವೃದ್ಧಿ ನಿಧಿಯಿಂದ 2 ಕೋಟಿ ರೂ., ಎಂಎಡಿಬಿಯಿಂದ 15 ಲಕ್ಷ ರೂ., ಕೊಳಚೆ ನಿರ್ಮೂಲನಾ ಮಂಡಳಿಯಿಂದ 2 ಕೋಟಿ ರೂ., ವಿವಿಧ ವಾರ್ಡುಗಳ ಅಭಿವೃದ್ಧಿಗೆ ಸರ್ಕಾರದ ವಿಶೇಷ ಅನುದಾನ 2 ಕೋಟಿ ರೂ.ಗಳನ್ನು ಆದಾಯದ ಮೂಲಗಳಲ್ಲಿ ಅಧ್ಯಕ್ಷರು ಬಜೆಟ್‌ನಲ್ಲಿ ಪ್ರಮುಖವಾಗಿ ನಿರೀಕ್ಷಿಸಿದ್ದಾರೆ.

(-ಪುಟ 4ಕ್ಕೆ)

- ಪ್ರಸಕ್ತ ಸಾಲಿಗೆ 113.04 ಕೋಟಿ ರೂ. ಬಜೆಟ್
- ಖಾತಾ ನಕಲು ಶುಲ್ಕದಿಂದ 10.38 ಕೋಟಿ ರೂ. ನಿರೀಕ್ಷೆ
- ಬೀದಿ ದೀಪ, ಕುಡಿಯುವ ನೀರಿನ ವಿದ್ಯುತ್ ಬಿಲ್ ಪಾವತಿಗೆ ರಾಜ್ಯ ಸರ್ಕಾರದಿಂದ 10.50 ಕೋಟಿ ರೂ.
- ಅಮೃತ್ ಯೋಜನೆಯಡಿ 2 ಕೋಟಿ ರೂ., ಕೆರೆಗಳ ಅಭಿವೃದ್ಧಿಗೆ ನಗರಾಭಿವೃದ್ಧಿ ಪ್ರಾಧಿಕಾರದಿಂದ 2 ಕೋಟಿ ರೂ. ನಿರೀಕ್ಷೆ
- ನಗರಸಭೆ ಹೊಸ ಕಚೇರಿ ಕಟ್ಟಡ ನಿರ್ಮಾಣಕ್ಕೆ 4.50 ಕೋಟಿ ರೂ., ಹಳೆ ನಗರಸಭೆ ಕಚೇರಿ ಆವರಣದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ 4.50 ಕೋಟಿ ರೂ. ನಿಗದಿ

ಕುಡಿಯುವ ನೀರು ಸಮಸ್ಯೆ : ಮುಂಜಾಗ್ರತೆ ವಹಿಸಲು ಸೂಚನೆ

ಅರಕಲಗೂಡು ತಾಲ್ಲೂಕು ಪಂಚಾಯಿತಿ ಪ್ರಗತಿ ಪರಿಶೀಲನಾ ಸಭೆ

ಅರಕಲಗೂಡು : ತಾಲ್ಲೂಕಿನ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಮುಂಜಾಗ್ರತೆ ವಹಿಸಿ ಕ್ರಮ ಕೈಗೊಳ್ಳಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಅಧಿಕಾರಿಗಳಿಗೆ ಸೂಚಿಸಿದರು.

ಇಲ್ಲಿನ ತಾ.ಪಂ. ಸಭಾಂಗಣದಲ್ಲಿ ಸೋಮವಾರ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬೇಸಿಗೆ ಸಮೀಪಿಸುತ್ತಿರುವ ಪರಿಣಾಮ ಸಾಕಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ ತಲೆದೋರಿದೆ. ಮಾದಾಪುರದಲ್ಲಿ ನೀರಿನ ಸಮಸ್ಯೆ ವಿಪರೀತವಾಗಿರುವುದಾಗಿ ಗ್ರಾಮಸ್ಥರು ನನ್ನ ಗಮನಕ್ಕೆ ತಂದಿದ್ದಾರೆ. ಬಿಟ್ಟಗೌಡನಹಳ್ಳಿ, ಕೊಡಕಹಳ್ಳಿ ಮುಂತಾದೆಡೆ ಬೋರ್‌ವೆಲ್ ಕೊರೆದು ನೀರು ಬಂದರೂ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ, ನೀರಿಗೆ ತತ್ವಾರವಿರುವೆಡೆ ಪಂಚಾಯಿತಿವಾರು ಟ್ಯಾಂಕರ್‌ಗಳಲ್ಲಿ ನೀರು ಸರಬರಾಜು ಮಾಡಲು ಆಯಾ ವ್ಯಾಪ್ತಿಯ ಪಿಡಿಒ ಮತ್ತು ಸ್ಥಳೀಯ ಪ್ರತಿನಿಧಿಗಳು ತುರ್ತಾಗಿ ಆದ್ಯತೆ ನೀಡಬೇಕು ಎಂದರು.

ಕೃಷಿ ಕಾರ್ಯದಲ್ಲಿ ರೈತರಿಗೆ ಸರಿಯಾದ ಮಾಹಿತಿ ಇಲ್ಲದೇ ಕೈ ಸುಟ್ಟುಕೊಳ್ಳುವಂತಾಗಿದೆ. ಅಧಿಕಾರಿಗಳು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಮಣ್ಣು ಪರೀಕ್ಷೆ ಕೈಗೊಳ್ಳುವಂತೆ ರೈತರಿಗೆ ಪ್ರೇರೇಪಿಸಿ ತಿಳಿ ಹೇಳಬೇಕು. ಇದರಿಂದ ಬೆಳೆದ ಬೆಳೆಗಳು ರೋಗಕ್ಕೆ ತುತ್ತಾಗಿ ನಷ್ಟದಿಂದ ಪಾರಾಗಲು ಸಾಧ್ಯವಿದೆ. ಈ ಕುರಿತು ಕ್ರಮ ಕೈಗೊಳ್ಳಬೇಕು ಎಂದು ಕೃಷಿ ಅಧಿಕಾರಿ ಕವಿತಾ ಅವರಿಗೆ ಸೂಚಿಸಿದರು.

(-ಪುಟ 4ಕ್ಕೆ)

ಶುಭಾಶಯ



ಜಿಲ್ಲೆಯ ಜನತೆಗೆ ಹಾಗೂ ಪತ್ರಿಕೆಯ ಓದುಗರಿಗೆ ಮಹಾ ಶಿವರಾತ್ರಿ ಹಬ್ಬದ ಶುಭಾಶಯಗಳು.

ಬಿಡುವು

'ಮಹಾ ಶಿವರಾತ್ರಿ' ಪ್ರಯುಕ್ತ ಫೆ.13ರಂದು ನಮ್ಮ ಕಾರ್ಯಾಲಯಕ್ಕೆ ಬಿಡುವು. ಹಾಗಾಗಿ ಫೆ.14ರ 'ಜನತಾ ಮಾಧ್ಯಮ' ಸಂಚಿಕೆ ಪ್ರಕಟವಾಗದು. -ಸಂ

ಆದಿನಾಥ ತೀರ್ಥಂಕರರ ಪ್ರತಿಮೆ ಮೆರವಣಿಗೆ

ಪಾಂಡುಕ ಶಿಲೆಯಲ್ಲಿ ಪ್ರತಿಷ್ಠಾಪನೆ

ಶ್ರವಣಬೆಳಗೊಳ : ಮಹಾಮಸ್ತಕಾಭಿಷೇಕ ಮಹೋತ್ಸವದ ಪ್ರಯುಕ್ತ ಜೈನಕಾಶಿ ಶ್ರವಣಬೆಳಗೊಳದ ಪಂಚಕಲ್ಯಾಣ ನಗರದಲ್ಲಿ ಸೋಮವಾರ ಭಗವಾನ್ ಆದಿನಾಥ ತೀರ್ಥಂಕರರ ಪ್ರತಿಮೆಯನ್ನು ಮೆರವಣಿಗೆ ಮೂಲಕ ಕರೆತಂದು ಪಾಂಡುಕ ಶಿಲೆಯಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು.

ಮೋಕ್ಷ ಕಲ್ಯಾಣ ಮುಗಿಯುವವರೆಗೂ ಪ್ರತಿದಿನ ಬೆಳಗ್ಗೆ ಹಾಗೂ ಸಂಜೆ ಸಮಯದಲ್ಲಿ ಪರಿನಿಷ್ಕ್ರಮಣ ಕಲ್ಯಾಣ ಹಾಗೂ ಪಂಚ ಪರಮೇಷ್ಠಿ ವಿಧಾನಗಳ ಮೂಲಕ ಆದಿನಾಥ ತೀರ್ಥಂಕರರಿಗೆ ದಿನನಿತ್ಯ ಪೂಜೆ ನಡೆಯಲಿದ್ದು, ತ್ಯಾಗಿಗಳಿಂದ ಪ್ರವಚನ ನಡೆಯಲಿದೆ.

ಪಂಚಕಲ್ಯಾಣ ನಗರದ ಚಾವುಂಡರಾಯ ಸಭಾ ಮಂಟಪದಿಂದ ಬೆಳಿಗ್ಗೆ 10.30ಕ್ಕೆ ಆದಿನಾಥ ತೀರ್ಥಂಕರರ ಪ್ರತಿಮೆಯ ಮೆರವಣಿಗೆಯು ಮಂಗಳ ವಾದ್ಯದೊಂದಿಗೆ ಆರಂಭಗೊಂಡು ಪಾಂಡುಕ ಶಿಲೆಗೆ ತಲುಪಿತು. ಪ್ರತಿಷ್ಠಾಪನೆಯ ಬಳಿಕ ವಿಶೇಷ ಪೂಜೆ ಜರುಗಿತು.

ಮಂಗಳವಾರದ ಕಾರ್ಯಕ್ರಮಗಳು

ಜೈನಕಾಶಿ ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕ ಮಹೋತ್ಸವದ ಅಂಗವಾಗಿ ಪಂಚಕಲ್ಯಾಣ ನಗರದಲ್ಲಿರುವ ಚಾವುಂಡರಾಯ ಮಂಟಪದಲ್ಲಿ ಚತುರ್ವಿಂಶತಿ ತೀರ್ಥಂಕರರ ಆರಾಧನೆ ಜರುಗಲಿದ್ದು, ಆಚಾರ್ಯಶ್ರೀ ಹಾಗೂ ಮಾತಾಜಿಯವರಿಂದ ಪ್ರವಚನ ಕಾರ್ಯಕ್ರಮ ನಡೆಯಲಿದೆ.

(-ಪುಟ 4ಕ್ಕೆ)

ಡಯಾಲಿಸಿಸ್ ಕೇಂದ್ರ ಸದುಪಯೋಗಕ್ಕೆ ಸಲಹೆ

ಬೇಲೂರು : ತಾಲ್ಲೂಕಿನಲ್ಲಿರುವ ರೋಗಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಡಯಾಲಿಸಿಸ್ ಕೇಂದ್ರವನ್ನು ತೆರೆಯಲಾಗಿದ್ದು, ಇದರ ಸದುಪಯೋಗವನ್ನು ರೋಗಿಗಳು ಪಡೆದುಕೊಳ್ಳಬೇಕು ಎಂದು ಶಾಸಕ ವೈ.ಎನ್.ರುದ್ರೇಶ ಗೌಡ ಹೇಳಿದರು.

ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ನೂತನವಾಗಿ ಪ್ರಾರಂಭಿಸಲಾಗಿರುವ ಡಯಾಲಿಸಿಸ್ ಕೇಂದ್ರವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, 30 ವರ್ಷಗಳ ಹಿಂದೆ 100 ಹಾಸಿಗೆಗಳ ಆಸ್ಪತ್ರೆ ನಿರ್ಮಿಸಬೇಕೆಂದು ನನ್ನ ಮನೆಗೆ ಅಂದಿನ ಸರ್ಕಾರದಿಂದ ಪತ್ರವೊಂದು ಬಂದಿತ್ತು. ಅದರಂತೆ ನಮ್ಮ ತಂದೆಯವರು ಆಸ್ಪತ್ರೆ ನಿರ್ಮಾಣಕ್ಕೆ ಸಹಕಾರ ನೀಡಿದ್ದರು. ಇದರಿಂದ ತಾಲ್ಲೂಕಿನ ಜನರಿಗೆ ಅನುಕೂಲವಾಗುತ್ತಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ತಾಲ್ಲೂಕಿನಲ್ಲಿ ಡಯಾಲಿಸಿಸ್ ರೋಗಿಗಳು ಹೆಚ್ಚಾಗಿದ್ದು, ಅವರು ಡಯಾಲಿಸಿಸ್‌ಗಾಗಿ ಬೇರೆಡೆಗಳಲ್ಲಿ ಲಕ್ಷಾಂತರ ರೂ. ಖರ್ಚು ಮಾಡಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಬಡವರು ಇಷ್ಟೊಂದು ಹಣವನ್ನು ವ್ಯಯಿಸಲು ಸಾಧ್ಯವಾಗದ ಕಾರಣ ರಾಜ್ಯ ಸರ್ಕಾರ ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರಗಳಲ್ಲೂ ಕೇವಲ 40 ರಿಂದ 50 ರೂ.ಗಳಿಗೆ ನೂತನವಾಗಿ ಡಯಾಲಿಸಿಸ್ ಕೇಂದ್ರಗಳನ್ನು ತೆರೆದು ಅನುಕೂಲ ಕಲ್ಪಿಸಿದೆ. ರೋಗಿಗಳು ಇದರ ಉಪಯೋಗ ಪಡೆದುಕೊಳ್ಳಬೇಕು ಎಂದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ॥ಯೋಗೇಶ್ ಮಾತನಾಡಿ, ರಾಜ್ಯ ಸರ್ಕಾರದ ಆದೇಶದಂತೆ ನಮ್ಮ ಆಸ್ಪತ್ರೆಯಲ್ಲೂ ಡಯಾಲಿಸಿಸ್ ಘಟಕವನ್ನು ತೆರೆಯಲಾಗುತ್ತಿದೆ. ಇಲ್ಲಿಗೆ ಇಬ್ಬರು ಡಯಾಲಿಸಿಸ್ ತಜ್ಞರು ಹಾಗೂ ಇಬ್ಬರು ದಾದಿಯರನ್ನು ನೇಮಿಸಲಾಗಿದೆ. ಬಿಪಿಎಲ್ ಕಾರ್ಡುದಾರರಿಗೆ ಉಚಿತ ಹಾಗೂ ಸಾಮಾನ್ಯರಿಗೆ ಆಡಳಿತ ಮಂಡಳಿ ನಿರ್ಧಾರದಂತೆ ದರ ನಿಗದಿಪಡಿಸಲಾಗುವುದು. ಆಸ್ಪತ್ರೆ ರೋಗಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಆಸ್ಪತ್ರೆ ಆವರಣದಲ್ಲಿಯೇ ಕ್ಯಾಂಟೀನ್ ತೆರೆಯುತ್ತಿದ್ದು, ಇದರ ಜವಾಬ್ದಾರಿಯನ್ನು ಅಂಗವಿಕಲರಿಗೆ ಮೊದಲ ಆದ್ಯತೆ ಮೇರೆಗೆ ನೀಡಿ, ನಂತರ ಬೇರೆಯವರಿಗೆ ಅವಕಾಶ ನೀಡಲಾಗುವುದು. ಇದಕ್ಕಾಗಿ ಟೆಂಡರ್ ಕರೆಯಲಾಗುವುದು. ರೋಗಿಗಳಿಗೆ ಕನಿಷ್ಠ ಹಣದಲ್ಲಿ ಊಟ, ತಿಂಡಿ ಕೊಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ಸಂದರ್ಭದಲ್ಲಿ ಖಾದಿ ಗ್ರಾಮೋದ್ಯೋಗ ಮಂಡಳಿ ನಿರ್ದೇಶಕ ವೈ.ಎನ್. ಕೃಷ್ಣೇಗೌಡ, ತಾ.ಪಂ. ಅಧ್ಯಕ್ಷ ಹರೀಶ್, ಉಪಾಧ್ಯಕ್ಷೆ ಕಮಲ ಚಿಕ್ಕಣ್ಣ, ಜಿ.ಪಂ. ಸದಸ್ಯರಾದ ಲತಾ ಮಂಜೇಶ್ವರಿ, ಲತಾ ದಿಲೀಪ್, ಆರೋಗ್ಯ ರಕ್ಷಾ ಸಮಿತಿಯ ತೀರ್ಥ ಕುಮಾರ್ ಇನ್ನಿತರರು ಇದ್ದರು.

'ಕೈ' ಪದಾಧಿಕಾರಿಗಳ ಆಯ್ಕೆಗೆ ವಿರೋಧ : ಪ್ರತ್ಯೇಕ ಮೆರವಣಿಗೆ

ಅರಸೀಕೆರೆ : ತಾಲ್ಲೂಕಿನ ಅರಸೀಕೆರೆ ಮತ್ತು ಗಂಡಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನೂತನವಾಗಿ ಆಯ್ಕೆಯಾಗಿರುವ ಪದಾಧಿಕಾರಿಗಳ ಆಯ್ಕೆಯನ್ನು ವಿರೋಧಿಸಿ ಎರಡು ಬಣಗಳು ಪರಸ್ಪರ ಕೆಸರು ಎರಚಿಕೊಳ್ಳುವ ಮಟ್ಟಿಗೆ ಪ್ರತ್ಯೇಕ ಮೆರವಣಿಗೆಗಳನ್ನು ಸೋಮವಾರ ನಗರದಲ್ಲಿ ನಡೆಸಿದವು. ಈ ಮೂಲಕ ಹಾಸನ ಜಿಲ್ಲೆಯಲ್ಲಿ ಕಾಂಗ್ರೆಸ್ ಇಬ್ಭಾಗವಾಗಿದೆಯೆಂದು ಮತ್ತೊಮ್ಮೆ ಪುಷ್ಟೀಕರಿಸಿತು.

ಈ ಹಿಂದೆ ಅರಸೀಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದ ಗಂಜಿಗೆರೆ ಚಂದ್ರಶೇಖರ್ ಅವರ ಸ್ಥಾನಕ್ಕೆ ಬಾಣಾವರ ಶ್ರೀನಿವಾಸ್ ಮತ್ತು ಗಂಡಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದ ಮಂಜುರಾಜ್ ಸ್ಥಾನಕ್ಕೆ ಮೆಟ್ರೋ ಬಾಬು ಅವರನ್ನು ರಾಜ್ಯ ಕೆಪಿಸಿಸಿ ಘಟಕ ಆಯ್ಕೆ ಮಾಡಿ ಅಧಿಕೃತ ಪ್ರಕಟಣೆ ಹೊರಡಿಸಿತ್ತು. ಜಿಲ್ಲೆಯಲ್ಲಿ ಕೆಪಿಸಿಸಿ ಉಪಾಧ್ಯಕ್ಷ ಬಿ.ಶಿವರಾಂ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಪರ ಕಾರ್ಯಕರ್ತರು ಜಿಲ್ಲೆಯಲ್ಲಿ ಮುಸುಕಿನ ಗುದ್ದಾಟ ನಡೆಸುತ್ತಾ ಪ್ರತ್ಯೇಕ ಬಣಗಳಾಗಿ ತಮ್ಮನ್ನು ತಾವು ಬಿಂಬಿಸಿಕೊಳ್ಳುತ್ತಿರುವುದಕ್ಕೆ ನಗರದಲ್ಲಿ ನಡೆದ ಪ್ರತ್ಯೇಕ ಮೆರವಣಿಗೆಗಳು ಮತ್ತಷ್ಟು ಸಾಕ್ಷೀಕರಿಸಿದವು.

ಜಿ.ಪಂ. ಸದಸ್ಯ ಪಟೇಲ್ ಶಿವಪ್ಪ ಮತ್ತು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಮಲ್ಲೇನಹಳ್ಳಿ ಶಿವಶಂಕರ ಸ್ವಾಮಿ ನೇತೃತ್ವದಲ್ಲಿ ನಗರದ ಪ್ರವಾಸಿ ಮಂದಿರದಲ್ಲಿ ಸಭೆ ನಡೆಸಿದ ಬಿ.ಶಿವರಾಂ ಬಣದ ನೂರಾರು ಕಾರ್ಯಕರ್ತರು, ಬಿ.ಹೆಚ್.ರಸ್ತೆ ಮೂಲಕ ಪಿ.ಪಿ.ವೃತ್ತದಲ್ಲಿ ಮೆರವಣಿಗೆಯೊಂದಿಗೆ ಆಗಮಿಸಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು. ಮೊದಲೇ ನಿಗದಿಪಡಿಸಿದಂತೆ ಎ.ಮಂಜು ವಿರುದ್ಧವಾಗಿ ನಡೆಯಬೇಕಾಗಿದ್ದ ಪ್ರತಿಭಟನೆಯು, ಇತ್ತೀಚೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ನೀಚ ಎಂಬ ಪದ ಉಪಯೋಗಿಸಿದ್ದಾರೆಂದು ಆರೋಪಿಸಿ ಜೆಡಿಎಸ್ ಮತ್ತು ಸ್ಥಳೀಯ ಶಾಸಕ ಕೆ.ಎಂ.ಶಿವಲಿಂಗೇಗೌಡ ವಿರುದ್ಧವಾಗಿ ನಡೆದಿದ್ದು ನಾಟಕೀಯ ತಿರುವು ಪಡೆಯಿತು.

ಇದೇ ಸಮಯದಲ್ಲಿ ನೂತನ ಕಾಂಗ್ರೆಸ್ ಕಛೇರಿಯಿಂದ ಪ್ರವಾಸಿ ಮಂದಿರದವರೆಗೆ ಎ.ಮಂಜು ಬಣವೆಂದು ಗುರುತಿಸಿಕೊಂಡ ಜಿ.ಪಂ. ಅಧ್ಯಕ್ಷೆ ಶ್ವೇತಾ ದೇವರಾಜ್, ವಕೀಲ ಬಿ.ಎನ್.ರವಿ ನೇತೃತ್ವದಲ್ಲಿ ಮೆರವಣಿಗೆಯು ಸಾಗುವುದರ ಮೂಲಕ ಪಿ.ಪಿ. ವೃತ್ತದಲ್ಲಿ ಸ್ವಲ್ಪ ಸಮಯ ಬಿಗುವಿನ ವಾತಾವರಣ ನಿರ್ಮಾಣ ಮಾಡಿತು. ಈ ಸಂದರ್ಭದಲ್ಲಿ ಬಿ.ಶಿವರಾಂ ಬಣದ ಕಾರ್ಯಕರ್ತರು ಎ.ಮಂಜು ವಿರುದ್ಧವಾಗಿ ಮತ್ತು ಎ.ಮಂಜು ಬಣದ ಕಾರ್ಯಕರ್ತರು ಬಿ.ಶಿವರಾಂ ವಿರುದ್ಧವಾಗಿ ಘೋಷಣೆಗಳನ್ನು ಕೂಗುವುದರ ಮೂಲಕ ತಾಲ್ಲೂಕಿನ ಪದಾಧಿಕಾರಿಗಳ ಆಯ್ಕೆಯಲ್ಲಿ ಹಸ್ತಕ್ಷೇಪ ಆಗಿದೆ ಎಂದು ಆರೋಪಿಸಿ ಪರಸ್ಪರ ಆಕ್ರೋಶ ವ್ಯಕ್ತಪಡಿಸಿದರು.

(-ಪುಟ 4ಕ್ಕೆ)

ನಾರ್ವೆ ಸೋಮಶೇಖರ್ ಘೋಷಣೆಗೆ ತೀವ್ರ ವಿರೋಧ



ಹಾಸನ : ಆಲೂರು-ಸಕಲೇಶಪುರ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯನ್ನಾಗಿ ನಾರ್ವೆ ಸೋಮಶೇಖರ್ ಅವರನ್ನು ಘೋಷಣೆ ಮಾಡಿರುವುದಕ್ಕೆ ಭಾರತೀಯ ಜನತಾ ಪಕ್ಷದ ಜಿಲ್ಲಾ ಎಸ್ಸಿ ಮೋರ್ಚಾ ಘಟಕದ ಅಧ್ಯಕ್ಷ ಮಲ್ಲಿಗೆವಾಳು ದ್ಯಾವಪ್ಪ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪಕ್ಷದ ರಾಜ್ಯಾಧ್ಯಕ್ಷ ಯಡಿಯೂರಪ್ಪ ಅವರು ಈ ಘೋಷಣೆ ಮಾಡಿರುವ ಸಂಬಂಧ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

ಕೇಂದ್ರದ ನಾಯಕರು, ಪಕ್ಷದ ವರಿಷ್ಠರು ಟಿಕೆಟ್ ಕುರಿತಂತೆ ತೀರ್ಮಾನ ಕೈಗೊಳ್ಳುತ್ತಾರೆ. ಯಡಿಯೂರಪ್ಪನವರ ಆಯ್ಕೆಯೇ ಅಂತಿಮವಲ್ಲ, ಹೊರಗಿನ ವ್ಯಕ್ತಿಗಳಿಗೆ ಟಿಕೆಟ್ ನೀಡಬಾರದು ಎಂದು ಕೋರಿದ್ದಾರೆ.

ಇಂದು ರುದ್ರಾಭಿಷೇಕ

ಹಾಸನ : ಮಹಾ ಶಿವರಾತ್ರಿ ಪ್ರಯುಕ್ತ ನಗರದ ಅರಳೇಪೇಟೆಯಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಮಂಗಳವಾರ ಸಂಜೆ 6 ಗಂಟೆಯಿಂದ ದೇವತಾ ಮೂರ್ತಿಗಳಿಗೆ ರುದ್ರಾಭಿಷೇಕ, ಮಹಾ ಪೂಜೆ ನಡೆಯಲಿದೆ.

ಪ್ರೇಮಿಗಳ ದಿನಾಚರಣೆಗೆ ವಿರೋಧ

ಸಕಲೇಶಪುರ : ಫೆಬ್ರವರಿ 14 ರಂದು ನಡೆಯುವ ಪ್ರೇಮಿಗಳ ದಿನವೆಂಬ ಪಾಶ್ಚಾತ್ಯ ಆಚರಣೆಗೆ ಹಿಂದೂ ಸಮಾಜದ ಸಂಪೂರ್ಣ ವಿರೋಧವಿದೆ ಎಂದು ತಿಳಿಸಿರುವ ಬಜರಂಗದಳ, ಪ್ರೇಮಿಗಳ ದಿನಾಚರಣೆ ಸಮಾಜದ ಸ್ವಾಸ್ಥ್ಯ ಕೆಡಿಸುವ ಆಚರಣೆಯಾಗಿದೆ ಎಂದು ದೂರಿದೆ.

ಈ ಕುರಿತು ಹೇಳಿಕೆ ನೀಡಿರುವ ಬಜರಂಗ ದಳದ ತಾಲ್ಲೂಕು ಸಂಚಾಲಕ ಧರ್ಮೇಶ್, ಹಿಂದೂ ಸಂಸ್ಕೃತಿಗೆ, ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡುವಂತಹ ಈ ರೀತಿಯ ಆಚರಣೆಗಳಿಗೆ ಎಡೆ ಮಾಡಿಕೊಡಬಾರದು. ನಗರದ ಹಲವಾರು ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಪ್ರವಾಸಿ ತಾಣವಾಗಿ ಪ್ರಖ್ಯಾತಿಯಾಗಿರುವ ಸಕಲೇಶಪುರದ ಮಂಜುಧಾರೆ ಕೋಟೆ, ಬಿಸಿಲೆಯ ಸುಂದರ ತಾಣಗಳು, ಜಲಪಾತ ಪ್ರದೇಶಗಳು ಇನ್ನೂ ಹಲವಾರು ಸುಂದರ ತಾಣಗಳಲ್ಲಿ ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರೇಮಿಗಳ ಸೋಗಿನಲ್ಲಿ ಬಂದು ಅಸಭ್ಯ ರೀತಿಯ ವರ್ತನೆಯಲ್ಲಿ ತೊಡಗಿ ಸಮಾಜದ ಸ್ವಾಸ್ಥ್ಯ ಕೆಡಿಸಲು ಮುಂದಾಗುತ್ತಿದ್ದಾರೆ. ಈ ಕಾರ್ಯಕ್ಕೆ ಎಡೆ ಮಾಡಿಕೊಡಬಾರದು ಎಂದಿದ್ದಾರೆ.

ಪ್ರೇಮ ಎಂಬುದು ಒಂದು ದಿನದಲ್ಲಿ ಹುಟ್ಟುವುದಿಲ್ಲ. ಬಣ್ಣದ ವಸ್ತ್ರಗಳನ್ನು ಹಾಕುವುದರಿಂದ ಪ್ರೀತಿ ಹುಟ್ಟುವುದಿಲ್ಲ. ಇವೆಲ್ಲವೂ ಡೋಂಗಿ ತೋರ್ಪಡಿಕೆ ಹಾಗೂ ಯುವ ಶಕ್ತಿಯನ್ನು ದಿಕ್ಕು ತಪ್ಪಿಸುವ ವಿದೇಶಿ ಹುನ್ನಾರ. ಆದ್ದರಿಂದ ಪ್ರೇಮಿಗಳ ದಿನದಂದು ಪ್ರಮುಖ ಸಾರ್ವಜನಿಕ ಪ್ರವಾಸಿ ಸ್ಥಳಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಆರಕ್ಷಕ ಸಿಬ್ಬಂದಿಗಳನ್ನು ನಿಯೋಜಿಸಿ ಅಹಿತಕರ ಘಟನೆಗಳು ನಡೆಯದಂತೆ ಶಿಸ್ತಿನ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಹೃತ್ಪೂರ್ವಕ ಅಭಿನಂದನೆಗಳು

ಆಲೂರು-ಸಕಲೇಶಪುರ ತಾಲ್ಲೂಕು ಬ್ಲಾಕ್ ಕಾಂಗ್ರೆಸ್
ಅಧ್ಯಕ್ಷರಾಗಿ ನೂತನವಾಗಿ ಆಯ್ಕೆಯಾಗಿರುವ
ಹೆಚ್.ಎಸ್.ಗಣೇಶ್
ಅವರಿಗೆ ಹೃದಯಪೂರ್ವಕ ಅಭಿನಂದನೆಗಳು
ಹಾಗೂ ಸಮಸ್ತ ಜನತೆಗೆ 'ಮಹಾ ಶಿವರಾತ್ರಿ'ಯ ಶುಭಾಶಯಗಳು

ಪರ್ವತಯ್ಯ
ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು,
ಸ್ಥಾಯಿ ಸಮಿತಿ ಅಧ್ಯಕ್ಷರು,
ಮಾಜಿ ಹೆಚ್.ಡಿ.ಸಿ.ಸಿ.ಬ್ಯಾಂಕ್ ನಿರ್ದೇಶಕರು,
ಹಾಸನ. ಆಲೂರು-ಸಕಲೇಶಪುರ-ಕಟ್ಟಾಯ
ಕ್ಷೇತ್ರದ ಸ್ಥಳೀಯ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿ

ಹೃತ್ಪೂರ್ವಕ ಕೃತಜ್ಞತೆಗಳು



ಆಲೂರು-ಸಕಲೇಶಪುರ ತಾಲ್ಲೂಕು ಬ್ಲಾಕ್ ಕಾಂಗ್ರೆಸ್
ಅಧ್ಯಕ್ಷರಾಗಿ ಆಯ್ಕೆಯಾಗಲು ಪ್ರತ್ಯಕ್ಷ ಹಾಗೂ
ಪರೋಕ್ಷವಾಗಿ ಸಹಕರಿಸಿದ ಜಿಲ್ಲೆ ಹಾಗೂ ತಾಲ್ಲೂಕಿನ
ಎಲ್ಲಾ ಕಾಂಗ್ರೆಸ್ ಮುಖಂಡರು, ನಾಯಕರು,
ಕಾರ್ಯಕರ್ತರು, ಅಭಿಮಾನಿಗಳಿಗೆ
ಮತ್ತು ಕ್ಷೇತ್ರದ ಜನತೆಗೆ ಹೃತ್ಪೂರ್ವಕ ಕೃತಜ್ಞತೆಗಳು
ಹಾಗೂ ತಾಲ್ಲೂಕಿನ ಸಮಸ್ತ ಜನತೆಗೆ
ಮಹಾ ಶಿವರಾತ್ರಿ ಹಬ್ಬದ ಶುಭಾಶಯಗಳು
ಹೆಚ್.ಎಸ್.ಗಣೇಶ್
ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು

ಸಕಲೇಶಪುರ - ಆಲೂರು - ಕಟ್ಟಾಯ ವಿಧಾನಸಭಾ ಕ್ಷೇತ್ರದ ಬಿಜೆಪಿ
ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ ಬಿಜೆಪಿ ರಾಜ್ಯಾಧ್ಯಕ್ಷರಾದ
ಶ್ರೀ ಬಿ.ಎಸ್.ಯಡಿಯೂರಪ್ಪ
ನವರಿಗೆ ಹಾಗೂ ಆಯ್ಕೆಗೆ
ಸಹಕಾರ ನೀಡಿದ ರಾಜ್ಯ ಹಾಗೂ ಜಿಲ್ಲೆ ಮತ್ತು ಕ್ಷೇತ್ರದ ಬಿಜೆಪಿ ನಾಯಕರಿಗೆ
ಹೃತ್ಪೂರ್ವಕ ಕೃತಜ್ಞತೆಗಳು.
ಕಳೆದ ಶುಕ್ರವಾರ ನಡೆದ ಸಕಲೇಶಪುರ-ಆಲೂರು - ಕಟ್ಟಾಯ ಕ್ಷೇತ್ರದ
ಬಿಜೆಪಿ ಪಕ್ಷದ ಬೃಹತ್ ಸಮಾವೇಶಕ್ಕೆ
ಆಗಮಿಸಿದಂತಹ ಪಕ್ಷದ ಎಲ್ಲಾ
ಪದಾಧಿಕಾರಿಗಳು, ಕಾರ್ಯಕರ್ತರು
ಮತ್ತು ಮತದಾರ ಬಂಧುಗಳಿಗೆ
ಪ್ರೀತಿಯ ತುಂಬು ಹೃದಯದ
ಕೃತಜ್ಞತೆಗಳು
ನಿಮ್ಮೆಲ್ಲರ ಪ್ರೀತಿಯ

ಶ್ರೀ ನಾರ್ವೇ ಸೋಮಶೇಖರ್
ಸಕಲೇಶಪುರ-ಆಲೂರು-ಕಟ್ಟಾಯ
ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ.

ಶ್ರೀ ಉದಯ್
ಸಮಾಜ ಸೇವಕರು ಹಾಗೂ ಉದ್ಯಮಿಗಳು,
ಬೆಂಗಳೂರು.